# ಮೋದಿ, ಷಾ, ಬಿಎಸ್‌ವೈ ಮುಂದೆ ಸಿದ್ದು ಆಟ ನಡೆಯುವುದಿಲ್ಲ

## ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರತಾಪ್ ಸಿಂಹ ವಾಗ್ದಾಳಿ

**ಮೈಸೂರು:** ಬಿಜೆಪಿ ರಾಷ್ಟ್ರಾಧ್ಯಕ್ಷ ಅಮಿತ್ ಷಾ, ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ರಾಜ್ಯಾಧ್ಯಕ್ಷ ಯಡಿಯೂರಪ್ಪ ಈ ಮೂವರು ತ್ರಿಮೂರ್ತಿಗಳ ಮುಂದೆ ಸಿದ್ದರಾಮಯ್ಯ ಆಟ ನಡೆಯುವುದಿಲ್ಲ ಎಂದು ಸರ್ಕಾರದ ವಿರುದ್ಧ ಮೈಸೂರು ಕೊಡಗು ಸಂಸದ ಪ್ರತಾಪ್ ಸಿಂಹ ವಾಗ್ದಾಳಿ ನಡೆಸಿದರು.

ಬಿ.ಎಸ್ ಯಡಿಯೂರಪ್ಪ ವಿರುದ್ಧ ಮತ್ತೆ ಪ್ರಕರಣ ದಾಖಲು ಹಿನ್ನೆಲೆ ಈ ಬಗ್ಗೆ ಮೈಸೂರಿನ ಸುತ್ತೂರಿನಲ್ಲಿ ಮಾತನಾಡಿದ ಎಂಪಿ ಪ್ರತಾಪ್ ಸಿಂಹ, ರಾಜ್ಯದ ಜನತೆ ಯಡಿಯೂರಪ್ಪರನ್ನು ಮುಂದಿನ ಸಿಎಂ ಎಂದು ಒಪ್ಪಿಕೊಂಡಿದ್ದಾರೆ. ಇದರಿಂದ ವಿಚಲಿತರಾಗಿ ಸಿಎಂ ಸಿದ್ದರಾಮಯ್ಯನವರು ಯಡಿಯೂರಪ್ಪನವರ ವಿರುದ್ಧ ಇಲ್ಲಸಲ್ಲದ ಆರೋಪ ಹೊರಿಸಿದ್ದಾರೆ. ಪ್ರಕರಣ ದಾಖಲಾಗುವಂತೆ ಮಾಡುತ್ತಿದ್ದಾರೆ.

ಸಿದ್ದರಾಮಯ್ಯ ಅವರಿಗೆ ಮುಂದಿನ ವಿಧಾನಸಭಾ ಚುನಾವಣೆಯೇ ಕೊನೆ ಚುನಾವಣೆಯಾಗಲಿದೆ ಎಂದು ಕಿಡಿಕಾರಿದರು.

ಅಮಿತ್ ಶಾ ಅವರು ಬೆಂಗಳೂರಿಗೆ ಬಂದು ಹೋದ ನಂತರ ಅವರಿಂದ ನಾವು ಏನೂ ಪಾಠ ಕಲಿಯುವ ಅಗತ್ಯವಿಲ್ಲ ಅಂತಾರೆ ಸಿಎಂ. ಜೈಲಿಗೆ ಹೋಗಿ ಬಂದವರ ಬಳಿ ನಾವೂ ಪಾಠ ಕಲಿಯುವ ಅಗತ್ಯವಿಲ್ಲ ಅಂತಾರೆ. ಆದ್ರೆ, ದುರಾದೃಷ್ಟವಶಾತ್ ಅಂದರೆ ಕೋರ್ಟ್ ನಿಂದಲೇ ದೂಷಿ ಅಂತ ತೀರ್ಮಾನ ಆಗಿತ್ತು. ದೇಶದ ಮೊದಲ ಮಹಿಳಾ ಪ್ರಧಾನಿಯನ್ನ ದೂಷಿ ಎಂದಿದ್ರು. ಚುನಾವಣೆಯಲ್ಲಿ ಅಕ್ರಮ ಎಸೆಗಿದ್ರು ಅಂತ ಜೈಲಿಗೆ ಹೋಗಿದ್ರು. ಅಂತವರ ಫೋಟೋ ಇಟ್ಕೊಂಡು ಇಂದಿರಾ ಕ್ಯಾಂಟೀನ್ ಮಾಡ್ತಾರೆ. ದೇಶದಲ್ಲಿ ತುರ್ತುಪರಿಸ್ಥಿತಿ ಹೇರಿ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿದ್ದರು.

ಇಂತವರನ್ನ ಆರಾಧಿಸುತ್ತಿರುವ ಕಾಂಗ್ರೆಸ್ ನವರು ನಮ್ಮ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಹರಿಹಾಯ್ದರು.

ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿದ್ರಲ್ಲ ದೇಶದ ಮೊದಲ ಮಹಿಳಾ ಪ್ರಧಾನಿ ಇಂದಿರಾ ಗಾಂಧಿ ಅಂತಹ ವ್ಯಕ್ತಿತ್ವವುಳ್ಳ ವ್ಯಕ್ತಿಗಳಿಂದ ನೀವು ಪಾಠ ಕಲಿಯುತ್ತೀರಾ ಎಂದು ಪ್ರಶ್ನಿಸಿ ಹ ಅವರು, ಬಿಜೆಪಿ ರಾಷ್ಟ್ರಾಧ್ಯಕ್ಷ ಅಮಿತ್ ಶಾ ಅವ್ರು ಬೆಂಗಳೂರಿಗೆ ಬಂದು ಹೋದ ನಂತರ ಅವರಿಂದ ನಾವು ಏನೂ ಪಾಠ ಕಲಿಯುವ ಅಗತ್ಯವಿಲ್ಲ ಎನ್ನುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದರು.

ಯಾರಿಂದ ಯಾರು ಪಾಠ ಕಲಿಯಬೇಕು ಅನ್ನೋದನ್ನು ಜನ ಹೇಳ್ತಾರೆ. ಕಾಯ್ತಾ ಇರಿ ಎಂದು ಸಂಸದ ಪ್ರತಾಪ್ ಸಿಂಹ ಸಿಎಂಗೆ ಟಾಂಗ್ ನೀಡಿದರು. ಜೈಲಿಗೆ ಹೋಗಿ ಬಂದವರಿಂದ ನಾವು ಪಾಠ ಕಲಿಯುವ ಅಗತ್ಯವಿಲ್ಲವೆಂದು ಸಿಎಂ ಹೇಳ್ತಾರೆ.

ಆದರೆ ದುರಾದೃಷ್ಟವಶಾತ್ ನ್ಯಾಯಾಲಯದಿಂದ ದೋಷಿ ಅಂತ ತೀರ್ಮಾನ ಆದವರ, ಚುನಾವಣೆಯಲ್ಲಿ ಅಕ್ರಮ ಎಸೆಗಿದ್ರು ಅಂತ ಜೈಲಿಗೆ ಹೋಗಿದ್ದವರ ಫೋಟೋ ಇಟ್ಕೊಂಡು ಇಂದಿರಾ ಕ್ಯಾಂಟೀನ್ ಮಾಡ್ತೀರಲ್ಲ ನಿಮಗೇನ್ ಹೇಳಬೇಕು ಎಂದು ಸಿಎಂ ವಿರುದ್ಧ ಪ್ರತಾಪ್ ಸಿಂಹ ಹರಿಹಾಯ್ದರು.



ಅಮಿತ್ ಶಾ ಅವರು ಬೆಂಗಳೂರಿಗೆ ಬಂದು ಹೋದ ನಂತರ ಅವರಿಂದ ನಾವು ಏನೂ ಪಾಠ ಕಲಿಯುವ ಅಗತ್ಯವಿಲ್ಲ ಅಂತಾರೆ ಸಿಎಂ. ಜೈಲಿಗೆ ಹೋಗಿ ಬಂದವರ ಬಳಿ ನಾವೂ ಪಾಠ ಕಲಿಯುವ ಅಗತ್ಯವಿಲ್ಲ ಅಂತಾರೆ. ಆದರೆ ದುರಾದೃಷ್ಟವಶಾತ್ ಅಂದರೆ ಕೋರ್ಟ್ ನಿಂದಲೇ ದೂಷಿ ಅಂತ ತೀರ್ಮಾನ ಆಗಿ–ತ್ತು. ದೇಶದ ಮೊದಲ ಮಹಿಳಾ ಪ್ರಧಾನಿಯನ್ನ ದೂಷಿ ಎಂದಿದ್ರು. ಚುನಾವಣೆಯಲ್ಲಿ ಅಕ್ರಮ ಎಸೆಗಿದ್ರು ಅಂತ ಜೈಲಿಗೆ ಹೋಗಿದ್ರು. ಅಂತವರ ಫೋಟೋ ಇಟ್ಕೊಂಡು ಇಂದಿರಾ ಕ್ಯಾಂಟೀನ್ ಮಾಡ್ತಾರೆ. ದೇಶದಲ್ಲಿ ತುರ್ತುಪರಿಸ್ಥಿತಿ ಹೇರಿ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿದ್ದರು. ಇಂತವರನ್ನ ಆರಾಧಿಸುತ್ತಿರುವ ಕಾಂಗ್ರೆಸ್ ನವರು ನಮ್ಮ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ

■ ಮೊದಲನೇ ಪುಟದಿಂದ...

## ಒಬ್ಬ ಶಾಸಕನಿಗೆ ಎರಡು ಕ್ಷೇತ್ರದ ಹೊಣೆಗಾರಿಕೆ

ಪಕ್ಷದ ಕೋರ್ ಕಮಿಟಿ ಸಭೆಯಲ್ಲೂ ಈ ಬಗ್ಗೆ ಚರ್ಚೆ ನಡೆದಿದೆ. ಅಮಿತ್ ಶಾ ನಿರ್ದೇಶನದಂತೆ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೂ ಉಸ್ತುವಾರಿ ನೇಮಕಕ್ಕೆ ನಿರ್ಧಾರ ಕೈಗೊಳ್ಳಲಾಗಿದ್ದು ಈ ಕುರಿತ ಮಾಹಿತಿಯನ್ನು ಹೈಕಮಾಂಡ್‌ಗೆ ಕಳುಹಿಸಲಿದೆ.

ಅಲ್ಲದೆ ಶಾಸಕರಿಗೆ ಮುಂದಿನ ಬಾರಿ ಅವರದ್ದೇ ಕ್ಷೇತ್ರದಲ್ಲಿ ಟಿಕೆಟ್ ಸಿಗುತ್ತದೆ ಎಂದು ಹೇಳುವ ಹಾಗಿಲ್ಲ. ಚುನಾವಣೆ ಹಿನ್ನಲೆ ಜವಾಬ್ದಾರಿ ವಹಿಸಿಕೊಂಡಿರುವ ವಿಧಾನಸಭಾ ಕ್ಷೇತ್ರದಿಂದಲೂ ಟಿಕೆಟ್ ನೀಡಬಹುದು. ಹೀಗಾಗಿ ಜವಾಬ್ದಾರಿ ವಹಿಸಿಕೊಂಡಿರುವ ಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಪಕ್ಷ ಬಲಪಡಿಸಬೇಕು ಎಂದು ಅಮಿತ್ ಶಾ ಸೂಚನೆ ನೀಡಿದ್ದು, ಟಿಕೆಟ್ ಆಕಾಂಕ್ಷಿಗಳಲ್ಲಿ ಇದೀಗ ತಲ್ಲಣ ಸೃಷ್ಠಿಸಿದೆ.

ಎಲ್ಲಾ ಹಾಲಿ ಶಾಸಕರಿಗೂ ಟಿಕೆಟ್ ಸಿಗಲ್ಲ ಎಂದು ಈಗಾಗಲೇ ಅಮಿತ್ ಶಾ ಸ್ಪಷ್ಟಪಡಿಸಿರುವುದರಿಂದ ಉಸ್ತುವಾರಿ ವಹಿಸಿಕೊಂಡ ಕ್ಷೇತ್ರಗಳಲ್ಲಿ ಹೆಚ್ಚಿನ ಶ್ರಮಹಾಕಿ ಪಕ್ಷ ಸಂಘಟಿಸಿ ಹಾಲಿ ಶಾಸಕರು ಟಿಕೆಟ್ ಗಿಟ್ಟಿಸಿಕೊಳ್ಳಬೇಕಿದೆ.

## ನಿತೀಶ್ ಮತ್ತೆ ಎನ್‌ಡಿಎ ತೆಕ್ಕೆಗೆ

ಹೀಗಾಗಿ ಶರದ್ ಯಾದವ್ ಅವರದ್ದೇ ನಿಜವಾದ ಜೆಡಿಯು ಪಕ್ಷವಾಗಿದ್ದು, ಅವರ ಬಣಕ್ಕೇ ಪಕ್ಷದ ಬಾಣದ ಗುರುತನ್ನು ಚಿನ್ಹೆಯಾಗಿ ನೀಡಬೇಕು ಎಂದು ಕೆಲ ಮುಖಂಡರು ಆಗ್ರಹಿಸಿದ್ದಾರೆ.

ಇತ್ತೀಚೆಗಷ್ಟೇ ಸಿಎಂ ನಿತೀಶ್ ಕುಮಾರ್ ಅವರು ಜೆಡಿಯು ಪಕ್ಷದಲ್ಲಿದ್ದ ಶರದ್ ಯಾದವ್ ಬಣದ ಮುಖಂಡರನ್ನು ಪಕ್ಷದ ವಿವಿಧ ಹುದ್ದೆಗಳಿಂದ ಕಿತ್ತೊಗೆದಿದ್ದರು. ಅಲ್ಲದೆ ಶರದ್ ಯಾದವ್ ಯಾವುದೇ ನಿರ್ಧಾರ ಕೈಗೊಳ್ಳಲು ಸ್ವತಂತ್ರರು ಎಂದು ಹೇಳುವ ಮೂಲಕ ಪರೋಕ್ಷವಾಗಿ ಶರದ್ ಯಾದವ್ ಅವರಿಗೆ ಟಾಂಗ್ ನೀಡಿದ್ದರು. ಇದೀಗ ನಿತೀಶ್ ಬಣಕ್ಕೆ ಬಿಸಿ ಮುಟ್ಟಿಸಲು ಮುಂದಾಗಿರುವ ಶರದ್ ಯಾದವ್ ಬಣ ಪಕ್ಷದ ಚಿನ್ಹೆಗಾಗಿ ಚುನಾವಣಾ ಆಯೋಗದ ಮೊರೆ ಹೋಗಿದೆ.

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್‌ಶಾರ ಕೆಲಸದಾಳು ಆಗಿದ್ದಾರೆ. ನಿತೀಶ್ ಅವರಿಗಾಗಿ ಕೆಲಸಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ಹೇಳಿದೆ.

ಆರ್ಜೆಡಿಯೊಂದಿಗೆ ಹೊಂದಾಣಿಕೆ ಕೊರತೆಯ ನೆಪದಲ್ಲಿ ನಿತೀಶ್ ಮಹಾಮೈತ್ರಿಯನ್ನು ತೊರೆದಿದ್ದು, ಆರ್ಜೆಡಿಯ ಹಲವು ನಾಯಕರ ಅಸಮಾಧಾನಕ್ಕೆ ಕಾರಣವಾಗಿದೆ. ನಿತೀಶ್ ಸ್ವಂತ ನೈತಿಕತೆಯನ್ನು ಛಿದ್ರಗೊಳಿಸಿ ಬಿಜೆಪಿಯತ್ತ ವಾಲಿದ್ದಾರೆ. ಬಿಹಾರದ ಅತ್ಯಂತ ಕೆಟ್ಟ ಮುಖ್ಯಮಂತ್ರಿಯಾಗಿ ನಿತೀಶ್ ಬದಲಾಗಿದ್ದಾರೆ ಎಂದು ಕಾಂಗ್ರೆಸ್ ನಾಯಕ ಸಂದೀಪ್ ದೀಕ್ಷಿತ್ ಹೇಳಿದರು.

ನಿತೀಶ್ ಬಿಜೆಪಿಯ ಬೆಂಬಲ ಕೇಳಿ ಹೊರಟು ಹೋಗಿರುವುದರಿಂದ ಸ್ವಾಭಿಮಾನ ಇರುವ ಹಲವು ಜೆಡಿಯು ನಾಯಕರು ಆ ಪಾರ್ಟಿಯನ್ನು ತೊರೆಯಲಿದ್ದಾರೆ ಎಂದು ತಾನು ಭಾವಿಸಿರುವುದಾಗಿ ದೀಕ್ಷಿತ್ ಹೇಳಿದ್ದಾರೆ.

## ಮಂಗಳವಾರ ನೂತನ ಸಚಿವರ ಪ್ರಮಾಣ ವಚನ

ಇರುವುದರಿಂದ 22ರಂದು ನೂತನ ಸಚಿವರ ಪ್ರಮಾಣ ವಚನಕ್ಕೆ ದಿನಾಂಕ ನಿಗದಿ ಮಾಡಲಾಗಿದೆ. ಹಿರಿಯ ಮುಖಂಡರಾದ ಎಚ್.ಎಂ. ರೇವಣ್ಣ, ಆರ್.ಬಿ. ತಿಮ್ಮಾಪುರ, ಷಡಕ್ಷರಿ ಸಚಿವರಾಗುವುದು

ಖಚಿತವಾಗಿದ್ದು, ಈ ಮೂವರು ಅಂದು ರಾಜ್ಯಪಾಲರಿಂದ ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎಂದು ತಿಳಿದು ಬಂದಿದೆ.

ಇಂದು ಸಚಿವ ಸಂಪುಟ ವಿಸ್ತರಣೆಗೆ ಕಾಲ ನಿಗದಿಯಾಗಿತ್ತು. ಆದರೆ, ತುಮಕೂರಿನಲ್ಲಿ ಬೃಹತ್ ಕಾರ್ಯಕ್ರಮ ಇದ್ದುದರಿಂದ ಇದನ್ನು ಮುಂದೂಡಲಾಗಿತ್ತು. 21ಕ್ಕೆ ನೂತನ ಸಚಿವರ ಪ್ರಮಾಣವಚನ ಎಂದು ಹೇಳಲಾಗಿತ್ತಾದರೂ ಅಂದು ಅಮವಾಸ್ಯೆ ಹಿನ್ನಲೆಯಲ್ಲಿ ಮುಂದೂಡಲಾಗಿತ್ತು. ಒಟ್ಟಾರೆ ಆ.22ರಂದು ಖಾಲಿ ಉಳಿದಿರುವ ಮೂರು ಸಚಿವ ಸ್ಥಾನಗಳು ಭರ್ತಿಯಾಗಲಿವೆ. ಯಾರಿಗೆ ಯಾವ ಖಾತೆ ಎಂಬುದು ಅಂದು ನಿರ್ಧಾರವಾಗಲಿದೆ.

## ಬಿಎಸ್‌ವೈಗೆ ಮತ್ತೆ ಭೂ ಉರುಳು: ಸಮನ್ಸ್ ಜಾರಿ

ಮುಂದೆ ಕಳುಹಿಸಿರುವ ಅವರು ಸೋಮವಾರ ಲೋಕಾಯುಕ್ತ ವಿಶೇಷ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಅರ್ಜಿ ಸಲ್ಲಿಸಲು ಸಿದ್ದತೆ ನಡೆಸಿದ್ದಾರೆ ಎಂದು ತಿಳಿದು ಬಂದಿದೆ.

ಶಿವರಾಮಕಾರಂತ ಬಡಾವಣೆ ಡಿನೋಟಿಫಿಕೇಷನ್ ಪ್ರಕರಣಕ್ಕೆ ಸಂಬಂಧಿಸಿ ಎಸಿಬಿಯಲ್ಲಿ ದಾಖಲಾಗಿರುವ ಎಫ್‌ಐಆರ್‌ನ್ನು ರದ್ದುಪಡಿಸುವಂತೆ ಬಿಎಸ್ ಯಡಿಯೂರಪ್ಪ ಹೈಕೋರ್ಟ್ ಮೊರೆ ಹೋಗಿದ್ದಾರೆ.

ಯಡಿಯೂರಪ್ಪ ಅವರು ಮುಖ್ಯ ಮಂತ್ರಿಯಾಗಿದ್ದ ಕಾಲದಲ್ಲಿ ಡಿನೋಟಿಫಿಕೇಷನ್ ಮಾಡಲಾಗಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ) ಯಡಿಯೂರಪ್ಪ ಅವರಿಗೆ ಶನಿವಾರ ಬೆಂಗಳೂರಿನ ಚಾಲುಕ್ಯ ವೃತ್ತದಲ್ಲಿರುವ ಎಸಿಬಿ ಕಚೇರಿಗೆ ಹಾಜರಾಗುವಂತೆ ಸಮನ್ಸ್ ಜಾರಿ ಮಾಡಿತ್ತು.

## ಜೈಲಿಗೆ ಹೋಗುವುದನ್ನು ಬಿಎಸ್‌ವೈ ತಪ್ಪಿಸಿಕೊಳ್ಳಲಿ: ಸಿಎಂ ತಿರುಗೇಟು

ಯಾವಾಗ ಅವರು ಬೈದು ಹೋದರೋ? ಆಗ ಇವರಿಗೆ ಹತಾಶೆಯಾಗಿದೆ. ಈ ಹತಾಶೆಯಿಂದ ಅವರು ನನ್ನನ್ನು ಜೈಲಿಗೆ ಕಳಿಸುವ ಮಾತನಾಡುತ್ತಿದ್ದಾರೆ.ಆದರೆ ಅದು ಈಡೇರದ ಕನಸು ಎಂದು ಅಣಕವಾಡಿದರು.

ಇವರು ನನ್ನನ್ನು ಜೈಲಿಗೆ ಕಳಿಸುವ ಬದಲು ತಾವು ಮಾಡಿಕೊಂಡ ಹಗರಣಗಳಿಂದ ಮೊದಲು ಬಚಾವಾಗಲಿ.ಅದರಿಂದ ಜೈಲಿಗೆ ಹೋಗುವುದನ್ನು ತಪ್ಪಿಸಿಕೊಳ್ಳಲಿ ಎಂದು ಅವರು ಟೀಕೆ ಮಾಡಿದರು.

ಹತಾಶೆಯಿಂದ ಇನ್ನೂ ಏನೇನೋ ಮಾತನಾಡುತ್ತಿದ್ದಾರೆ. ಅವರ ಸ್ಥಿತಿ ನೋಡಿದರೆ ಇನ್ನು ಹತಾಶೆಯ ಮೇಲೆ ಹತಾಶೆ ಅನುಭವಿಸುವುದೇ ಅವರ ಕೆಲಸ ಎಂದು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಸಚಿವ ರೋಷನ್ ಬೇಗ್, ಸಂಸದ ಪಿ.ಸಿ.ಮೋಹನ್ ಅವರು ಉಪಸ್ಥಿತರಿದ್ದರು.

## ಡಿಎಡ್ ಹೊಂದಿಲ್ಲದ ಶಿಕ್ಷಕರ ವಜಾ:ರಾಜ್ಯಕ್ಕೆ ಕೇಂದ್ರ ಸೂಚನೆ

ವಿಫಲವಾಗುವ ಯಾವುದೇ ಶಿಕ್ಷಕ, ಶಿಕ್ಷಕಿಯರನ್ನು ವಜಾಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ. ಅಗತ್ಯ ಕನಿಷ್ಠ ವೃತ್ತಿಪರ ವಿದ್ಯಾರ್ಹತೆ ಪಡೆಯಲು ಇದು ಶಿಕ್ಷಕರಿಗೆ ನೀಡುತ್ತಿರುವ ಕೊನೆಯ ಅವಕಾಶವಾಗಿದೆ ಎಂದು ತಿಳಿಸಲಾಗಿದೆ.

ಸೇವೆಯಲ್ಲಿರುವ ಎಲ್ಲ ಶಿಕ್ಷಕರು ಡಿ.ಎಡ್ ವಿದ್ಯಾರ್ಹತೆ ಹೊಂದುವುದನ್ನು ಕಡ್ಡಾಯಗೊಳಿಸಲಾಗಿದೆ. ಈ ಸಂಬಂಧ ರಾಜ್ಯ ಸರ್ಕಾರಗಳು ಶಾಲೆಗಳಿಗೆ ಅಂತಿಮ ಗಡುವಿನ ಬಗ್ಗೆ ಮಾಹಿತಿ ನೀಡಬೇಕು ಹಾಗೂ ಶಿಕ್ಷಕರು ಈ ವಿದ್ಯಾರ್ಹತೆ ಹೊಂದುವಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಅನಿತಾ ಕಾರ್ವಾಲ್ ತಿಳಿಸಿದ್ದಾರೆ.

ನಾವು ಈ ಪ್ರಕ್ರಿಯೆಯನ್ನು ಆರಂಭಿಸಿದ್ದೇವೆ. ರಾಜ್ಯಾದ್ಯಂತ ಇರುವ ಎಲ್ಲ ಶಿಕ್ಷಕರಿಗೆ ಈ ಬಗ್ಗೆ ಮಾಹಿತಿ ನೀಡಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ತನ್ವೀರ್ ಸೇಠ್ ಹೇಳಿದ್ದಾರೆ.

## ಕೆಎಎಸ್ ಅಧಿಕಾರಿಗೆ ಬೆದರಿಕೆ

2010–11ರ ಅವಧಿಯಲ್ಲಿ ಬಸವರಾಜೇಂದ್ರ ಎಂಬವರು ಭೂ ಸ್ವಾಧೀನಾಧಿಕಾರಿಯಾಗಿದ್ದರು. 14 ತಿಂಗಳು ಭೂ ಸ್ವಾಧೀನಾಧಿಕಾರಿಯಾಗಿದ್ದ ಬಸವರಾಜೇಂದ್ರರಿಗೆ ಸುಳ್ಳು ಹೇಳದಿದ್ದರೆ ಪ್ರಕರಣದಲ್ಲಿ ಆರೋಪಿ ಮಾಡುವ ಬೆದರಿಕೆ ಬಂದಿತ್ತೆಂಬ ವಿಚಾರ ತಿಳಿದು ಬಂದಿದೆ.

ಯಡಿಯೂರಪ್ಪ ಮಾತ್ರವಲ್ಲದೆ ಬಸವರಾಜೇಂದ್ರ ವಿರುದ್ಧವೂ ಎಸಿಬಿ ಅಧಿಕಾರಿಗಳು ಎಫ್‌ಐಆರ್ ದಾಖಲಿಸಿದ್ದರು. ಈ ವಿಚಾರವಾಗಿ ಡಿವೈಎಸ್‌ಪಿ ಬಾಲರಾಜ್ ಮತ್ತು ಅಂಥೋಣಿಯವರು ಆ.10ರಂದು ಬಸವರಾಜೇಂದ್ರರಿಗೆ ಕರೆ ಮಾಡಿ ಬಿಎಸ್‌ವೈ ವಿರುದ್ಧ ಸುಳ್ಳು ಆರೋಪ ಮಾಡುವಂತೆ ಒತ್ತಡ ಹೇರಿದ್ದರಂತೆ. ಆದರೆ ವಿಚಾರಣೆ ಸಂದರ್ಭದಲ್ಲಿ ಬಸವರಾಜೇಂದ್ರ ಎಸಿಬಿ ಅಧಿಕಾರಿಗಳಿಗೆ 'ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ನಾನು ಕೆಲಸ ನಿರ್ವಹಿಸಿದ್ದೇನೆ. ನನ್ನ ಅಧಿಕಾರ ವ್ಯಾಪ್ತಿಯಲ್ಲಿ ನಾನು ಕೆಲಸ ಮಾಡಿದ್ದೇನೆ' ಎಂದಿದ್ದರು.

ಈ ಎಲ್ಲಾ ವಿಚಾರಗಳಿಂದ ಬಸವರಾಜೇಂದ್ರ ಇದೀಗ ರಾಜ್ಯ ಸರ್ಕಾರ ಎಸಿಬಿಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿ ಅಧಿಕಾರಿಗಳ ವಿರುದ್ಧ ದೂರು ದಾಖಲಿಸಿದ್ದಾರೆ.

ಶಿವರಾಮ ಕಾರಂತ ಬಡಾವಣೆ ಡಿನೋಟಿಫಿಕೇಶನ್ ಪ್ರಕರಣ ಸಂಬಂಧ ಆಗಸ್ಟ್ 10ರಂದು ಕರೆ ಮಾಡಿ ಕರೆಸಿಕೊಂಡಿದ್ದ ಎಸಿಬಿಯ ಬಾಲರಾಜ್ ಮತ್ತು ಆಂಥೋನಿ ವಿಚಾರಣೆ ನಡೆಸಿದ್ದರು. ಈ ಸಂದರ್ಭ ನನ್ನ ಮೇಲೆ ಒತ್ತಡ ಹೇರಿದ್ದಾರೆ ಎಂದು ರಾಜ್ಯಪಾಲರಿಗೆ ಬರೆದಿರುವ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

## ಶಿಕ್ಷಕಿ ಆತ್ಮಹತ್ಯೆ; ಇಬ್ಬರ ಸೆರೆ

**ಶಿವಮೊಗ್ಗ:** ಶಿಕ್ಷಕಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ಭದ್ರಾವತಿಯ ಕಾಗದನಗರ ಠಾಣೆ ಪೊಲೀಸರು ಶಾಲೆಯ ಆಡಳಿತ ಮಂಡಳಿ ಮುಖ್ಯಸ್ಥ ಹಾಗೂ ಮುಖ್ಯ ಶಿಕ್ಷಕಿಯನ್ನು ಬಂಧಿಸಿದ್ದಾರೆ.

ಭದ್ರಾವತಿಯ ಹುಡ್ಕೋ ಕಾಲನಿಯ ಅಂಬೇಡ್ಕರ್ ಶಾಲೆಯ ಶಿಕ್ಷಕಿ ಹೇಮಾವತಿ (40) ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡಿದ್ದರು. ಇದಕ್ಕೆ ಶಾಲೆಯಲ್ಲಿನ ಕಿರುಕುಳವೇ ಕಾರಣ ಎನ್ನಲಾಗಿತ್ತು. ಈ ಹಿನ್ನೆಲೆಯಲ್ಲಿ ಪೊಲೀಸರು ಶಾಲೆಯ ಹೆಡ್ ಮಿಸ್ ಶುಭಮಂಗಳಾ ಮತ್ತು ಆಡಳಿತ ಮಂಡಳಿಯ ಮುಖ್ಯಸ್ಥ ವಿಜಯ್ ಎನ್ನುವವರನ್ನು ಬಂಧಿಸಿದ್ದಾರೆ.

ಶಾಲೆಯಲ್ಲಿ ಮೂಲಸೌಕರ್ಯವಿಲ್ಲ ಎಂದು ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ ಶಾಲೆ ಮುಚ್ಚಲು ಸೂಚಿಸಲಾಗಿತ್ತು. ಆದರೆ ಆಡಳಿತ ಮಂಡಳಿಯವರು ತಡೆಯಾಜ್ಞೆ ತಂದು ಮುಂದುವರೆಸಿದ್ದರು. ಶಿಕ್ಷಕರನ್ನು ಬಿಡುಗಡೆಗೊಳಿಸದೆ, ಅವರಿಗೆ ಸವಲತ್ತು ನೀಡದೆ ಸತಾಯಿಸುತ್ತಿದ್ದರು ಎಂದು ದೂರಲಾಗಿದೆ. ಇದನ್ನು ಆಡಳಿತ ಮಂಡಳಿ ನೀಡದ ಹಿನ್ನೆಲೆಯಲ್ಲಿ ಮನನೊಂದು ಹೇಮಾವತಿ ವಿಷ ಸೇವಿಸಿ ಸಾವಿಗೀಡಾಗಿದ್ದರು. ಜೊತೆಗೆ ಚೀಟಿ ಬರೆದಿಟ್ಟು ಸಾವಿಗೆ ಮುಖ್ಯಶಿಕ್ಷಕಿ ಮತ್ತು ಶಾಲಾ ಮುಖ್ಯಸ್ಥ ವಿಜಯ್ ಕಾರಣ ಎಂದಿದ್ದರು. ಈ ಹಿನ್ನೆಲೆಯಲ್ಲಿ ಅವರಿಬ್ಬರ ಬಂಧನ ನಡೆದಿದೆ ಎನ್ನಲಾಗಿದೆ.

## ಡೆಂಗ್ಯೂ ವಿರೋಧಿ ಮಾಸಾಚರಣೆ

**ಪಿರಿಯಾಪಟ್ಟಣ(ಮೈಸೂರು):** ಕಂಪಲಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ಸಹಯೋಗದಲ್ಲಿ ಡೆಂಗ್ಯೂ ವಿರೋಧಿ ಮಾಸಾಚರಣೆ ಆಚರಿಸಲಾಯಿತು. ಜಿಲ್ಲಾ ರೋಗವಾಹಕ, ಆಶ್ರಿತ ರೋಗಗಳ ಇಲಾಖೆ ಮೇಲ್ವಿಚಾರಕ ವೇಣುಗೋಪಾಲ್ ಮಾತನಾಡಿ ಹಳ್ಳಿಗಳು, ನಗರ ಪ್ರದೇಶಗಳೆನ್ನದೆ ಇತ್ತೀಚಿನ ದಿನಗಳಲ್ಲಿ ಎಲ್ಲೆಡೆ ಡೆಂಗ್ಯೂ, ಚಿಕೂನ್ ಗುನ್ಯಾ ರೋಗಗಳು ಹೆಚ್ಚುತ್ತಿದ್ದು ಸಾರ್ವಜನಿಕರು ಮುನ್ನೆಚ್ಚರಿಕೆ ಕ್ರಮ ಅನುಸರಿಸುವುದು ಒಳ್ಳೆಯದು ಎಂದು ತಿಳಿಸಿದರು.

ವೈದ್ಯಾಧಿಕಾರಿ ಡಾ.ಪ್ರಸನ್ನಕುಮಾರ್ ಮಾತನಾಡಿ ಖಾಯಿಲೆ ಬಂದಾಗ ಆಸ್ಪತ್ರೆಗೆ ಧಾವಿಸುವ ಬದಲು ಜಾಗೃತರಾಗಿ ಖಾಯಿಲೆಗಳನ್ನು ದೂರವಿಡಿ, ಮನೆಯಲ್ಲಿ ನೀರು ಶೇಖರಿಸುವ ಪಾತ್ರೆಗಳನ್ನು ಆಗಾಗ್ಗೆ ಸ್ವಚ್ಚಗೊಳಿಸಿ, ಒಣಗಿಸಿ ನಂತರ ನೀರು ಶೇಖರಿಸಿ, ಮನೆಯ ಸುತ್ತಮುತ್ತ ನೀರು ನಿಲ್ಲದ ಹಾಗೆ ಎಚ್ಚರ ವಹಿಸಿ ಎಂದರು.

ಇದೇ ಸಂದರ್ಭ ಜಿ.ಪಂ.ಸದಸ್ಯೆ ಕೌಸಲ್ಯ ಲೋಕೇಶ್, ಗ್ರಾ.ಪಂ.ಅಧ್ಯಕ್ಷ ಗಿರೀಶ್, ಆರೋಗ್ಯ ಸಹಾಯಕ ಜಿ.ವಿ.ಶ್ರೀನಾಥ್, ವಿಶ್ವಜ್ಞ, ದೊಡ್ಡಬೇಲಾಳು ಪಿಡಿಒ ರವಿಕುಮಾರ್, ಅಂಗನವಾಡಿ, ಆಶಾ ಕಾರ್ಯಕರ್ತೆಯರು ಹಾಜರಿದ್ದರು.

## ವೈಕೆಆರ್ ಪಾರ್ಕ್ ಬಳಿ ಶವ ಪತ್ತೆ: ಕೊಲೆ ಶಂಕೆ

**ಕುಣಿಗಲ್(ತುಮಕೂರು):** ಪಟ್ಟಣದ ಕೆಆರ್‌ಎಸ್ ಅಗ್ರಹಾರ ವೈಕೆಆರ್ ಪಾರ್ಕ್ ಬಳಿ ನೇಣು ಬಿಗಿದುಕೊಂಡ ಸ್ಥಿತಿಯಲ್ಲಿದ್ದ ವ್ಯಕ್ತಿಯ ಶವ ಪತ್ತೆಯಾಗಿದೆ.

ಮೃತ ಉಮೇಶ್(45) ಹಾಸನ ಜಿಲ್ಲೆಯ ಹೊಳೆನರಸಿಪುರ ತಾಲೂಕಿನ ವಾಸಿ ಎಂದು ಗುರುತಿಸಲಾಗಿದೆ. ಪಟ್ಟಣದ ಖಾಸಗಿ ಬಸ್ ನಿಲ್ದಾಣದಲ್ಲಿರುವ ಸುಪ್ರಭಾತ ಹೋಟಲ್‌ನಲ್ಲಿ ಕ್ಲೀನರ್ ಆಗಿ ಕೆಲಸ ಮಾಡುತ್ತಿದ್ದ ಎನ್ನಲಾಗಿದೆ. ಆದರೆ ಕಳೆದ ರಾತ್ರಿ ಕೆಲಸ ಮುಗಿಸಿಕೊಂಡ ಬಂದ ನಂತರ ವೈಕೆ.ಆರ್ ಉದ್ಯಾನವನದ ಗ್ರೀಲ್‌ಗೆ ಟವಲ್ ನಿಂದ ನೇಣು ಬಿಗಿದುಕೊಂಡ ರೀತಿಯಿಲ್ಲಿ ಶವವಾಗಿ ಪತ್ತೆಯಾಗಿದ್ದಾನೆ. ಕಾಲುಗಳು ನೆಲಕ್ಕೆ ತಾಗಿಸಿದ್ದು ಇದು ಅತ್ಮಹತ್ಯೆ ಅಲ್ಲ ಕೊಲೆಯಾಗರಬಹುದೆಂದು ನಾಗರೀಕರು ಸಂಶಯ ವ್ಯಕ್ತಪಡಿಸಿದ್ದಾರೆ. ಪಟ್ಟಣದ ಪೋಲಿಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

## ಗೌರಿ ಗಣೇಶ ಹಬ್ಬದ ಪ್ರಯುಕ್ತ ಮಾಂಸ ಮಾರಾಟ ನಿಷೇಧ

**ತುಮಕೂರು:** ಗೌರಿ ಗಣೇಶ ಹಬ್ಬದ ಪ್ರಯುಕ್ತ ಆಗಸ್ಟ್ 25ರಂದು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ರೀತಿಯ ಮಾಂಸ ಮಾರಾಟ ನಿಷೇಧಿಸಲಾಗಿದೆ. ಈ ನಿಷೇಧದನ್ವಯ ಆಗಸ್ಟ್ 24ರ ಸಂಜೆ 5 ಗಂಟೆಯಿಂದ 25ರ ಮಧ್ಯರಾತ್ರಿ 12 ಗಂಟೆಯವರೆಗೆ ಪಾಲಿಕೆ ವ್ಯಾಪ್ತಿಯ ಕಸಾಯಿಖಾನೆ ಹಾಗೂ ಮಳಿಗೆಗಳನ್ನು ಮುಚ್ಚುವುದು ಹಾಗೂ ಈ ಅವಧಿಯಲ್ಲಿ ಮಾಂಸ ಮಾರಾಟ ಮಾಡುವುದು, ಸಂಗ್ರಹಣೆ ಮಾಡುವುದನ್ನು ನಿಷೇಧಿಸಲಾಗಿದೆ ಎಂದು ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

# ಬಡವರ ಕಷ್ಟಗಳಿಗೆ ಸ್ಪಂದಿಸುವ ಕೆಲಸ ನನ್ನದು

## ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಂ ಹೇಳಿಕೆ

**ದಾವಣಗೆರೆ:** ಸ್ವಂತ ಸೂರಿನ ನೆರಳಿನಾಶ್ರಯವಿಲ್ಲದ ಸುಮಾರು 12 ಸಾವಿರ ಕುಟುಂಬಗಳಿಗೆ ಆಶ್ರಯ ಮನೆಗಳನ್ನು ನಿರ್ಮಿಸುವುದು ರಾಜ್ಯದಲ್ಲೇ ಯಾರೂ ಮಾಡದಂತಹ ಕಾರ್ಯ ನಾನು ಮಾಡಿರುವುದು ನನಗೆ ತುಂಬಾ ಹೆಮ್ಮೆ ಅನಿಸುತ್ತದೆ ಎಂದು ನಿವೃತ್ತ ಜಿಲ್ಲಾಧಿಕಾರಿ ಕೆ.ಶಿವರಾಂ ಹೇಳಿದರು.

ಇಲ್ಲಿನ ಎಸ್.ಓ.ಜಿ. ಕಾಲೋನಿಯ ಭಾರತೀಯ ಜನತಾ ಪಾರ್ಟಿ ವತಿಯಿಂದ ಹಮ್ಮಿಕೊಂಡಿದ್ದ ಕೆ.ಶಿವರಾಂ ಅವರಿಗೆ ಅಭಿನಂದನಾ ಸಮಾರಂಭದಲ್ಲಿ ಅವರು ಮುಖ್ಯ ಅತಿಥಿಯಾಗಿ ಭಾಗಹಿಸಿ ಮಾತನಾಡಿದರು.

ನಾನು ಬಾಲ್ಯದಿಂದಲೂ ಗುಡಿಸಲಿನಲ್ಲೇ ಆಶ್ರಯ ಪಡೆದಿರುವ ವ್ಯಕ್ತಿ. ಕಷ್ಟಪಟ್ಟು ಓದಿ, ಕನ್ನಡದಲ್ಲೇ ಐಎಎಸ್ ಪರೀಕ್ಷೆ ಪಾಸಾಗಿ ಪ್ರಥಮ ಬಾರಿಗೆ ದಾವಣಗೆರೆಯಲ್ಲಿ ಜಿಲ್ಲಾಧಿಕಾರಿಯಾಗಿ ಬಡವರಿಗೆ, ನಿರ್ಗತಿಕರಿಗೆ, ಕೂಲಿ ಕಾರ್ಮಿಕರಿಗೆ, ಆಟೋ ಚಾಲಕರಿಗೆ ಮತ್ತು ಎಲ್ಲಿ ಗುಡಿಸಲುಗಳು ಕಾಣಿಸುತ್ತವೆ ಅಲ್ಲೇ ನಿಂತು ಅವರ ಕಷ್ಟಗಳಿಗೆ ಭಾಗಿಯಾಗಿ ಅಲ್ಲಿಯೇ ಅವರಿಗೆ ಪರಿಹಾರ ಕಲ್ಪಿಸುವ ಕಾಯಕ ನನ್ನದಾಗಿತ್ತು ಎಂದು ಸ್ಮರಿಸಿಕೊಂಡರು.

ಕಳೆದ 15 ವರ್ಷಗಳ ಹಿಂದೆ ನಾನು ದಾವಣಗೆರೆಯಲ್ಲಿ ಜಿಲ್ಲಾಧಿಕಾರಿಯಾಗಿದ್ದ ಸಂದರ್ಭದಲ್ಲಿ ಎಲ್ಲಾ ವರ್ಗದ ಜನರಿಗೆ 12 ಸಾವಿರ ಆಶ್ರಯ ಮನೆಗಳನ್ನು ನಿರ್ಮಾಣ ಮಾಡಿರುವ ತುಂಬಾ ಸಂತೋಷವನ್ನುಂಟು ಮಾಡಿದ ಆ ಸಂದರ್ಭದಲ್ಲಿ ನಿರ್ಮಾಣ ಹಂತದಲ್ಲಿದ್ದ ಬೂದಾಳು ರಸ್ತೆಯಲ್ಲಿ ಸುಮಾರು 400 ಆಶ್ರಯ ಮನೆಗಳು ನಿರ್ಮಾಣ ಆಗಬೇಕಿತ್ತು. ತಕ್ಷಣವೇ ನನ್ನನ್ನು ಬೇರೆಡೆಗೆ ವರ್ಗಾಯಿಸಿದರು. ಈಗ ಬಂದು ಆ ಆಶ್ರಯ ಮನೆಗಳನ್ನು ನೋಡಿದರೆ ಅವು ಹಾಗೇ ಇದ್ದಾವೆ ಎಂದು ನೊಂದು ಬೇಸರ ವ್ಯಕ್ತಪಡಿದರು.

ಹಾಗೆಯೇ ನಾನು ಈ ಸಮಾರಂಭಕ್ಕೆ ಬಂದ ಸಂದರ್ಭದಲ್ಲಿ ದಾವಣಗೆರೆ ಆಟೋ ಚಾಲಕರ ಮತ್ತು ಮಾಲೀಕರ ಸಂಘದ ಮಾಜಿ ಅಧ್ಯಕ್ಷರಾದ ಹೆಚ್.ತಿಮ್ಮಣ್ಣನವರು ಹಾಗೂ ಜೆ.ಗಿರೀಶ್‌ರವರು ನೂರಾರು ಬೆಂಬಲಿಗರೊಂದಿಗೆ ಮಾಜಿ ಸಚಿವರ ಎಸ್.ಎ.ರವೀಂದ್ರನಾಥ್ ಹಾಗೂ ಸಂಸದ ಜಿ.ಎಂ.ಸಿದ್ದೇಶ್ವರ್ ಅವರ ನೇತೃತ್ವದಲ್ಲಿ ಭಾರತೀಯ ಜನತಾಪಾರ್ಟಿಗೆ ಸೇರ್ಪಡೆಗೊಂಡಿರುವುದು ತುಂಬಾ ಸಂತೋಷ ತಂದಿದೆ. ಇನ್ನು ತಾವುಗಳು ಪಕ್ಷಕ್ಕೆ ನಿಷ್ಠಾವಂತರಾಗಿ ಸೇವೆ ಸಲ್ಲಿಸಿ, ನೀವು ಹುಟ್ಟು ಹೋರಾಟದಲ್ಲೇ ಬಂದಿರುವಕ್ಕೆ ವ್ಯಕ್ತಿಗಳಾಗಿದ್ದು, ದಾವಣಗೆರೆ ಜಿಲ್ಲೆಯಲ್ಲಿ ಬಿಜೆಪಿ ಪಕ್ಷವನ್ನು ಬಲಿಷ್ಠಗೊಳಿಸಬೇಕೆಂದು ಕರೆ ನೀಡಿದರು.

ಹಾಗೇಯೇ ಈ ಒಂದು ಭಾಗದಲ್ಲಿ 1,470 ಆಶ್ರಯ ಮನೆಗಳು ನಿರ್ಮಾಣ ಆಗುವುದಕ್ಕೆ ಅಂದಿನ ಆಟೋ ಚಾಲಕರ ಸಂಘದ ಅಧ್ಯಕ್ಷರಾದ ಬಿ.ಕಲ್ಲೇಶಪ್ಪ, ನಾನು ಜಿಲ್ಲಾಧಿಕಾರಿಯಾಗಿದ್ದ ಸಂದರ್ಭದಲ್ಲಿ ಪ್ರತಿನಿತ್ಯ ನನ್ನ ಕಚೇರಿಗೆ ಭೇಟಿ ನೀಡಿ, ನಮ್ಮ ಚಾಲಕ ವರ್ಗದವರಿಗೂ, ಬಡವರಿಗೆ ನಿವೇಶನ ನಿರ್ಮಿಸಿಕೊಡುವಂತೆ ಅವರ ಅಳಲು ತೋಡಿಕೊಂಡರು. ಆದರೆ ಅವರು ಪಾಲಿಕೆ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿ ಸ್ಪರ್ಧಿಸಿದರೆ ಅವರಿಗೆ ಕೇವಲ 300 ಮತಗಳ ಅಂತರದಿಂದ ಸೋಲಿಸಿರುವುದು ನನಗೆ ತುಂಬಾ ನೋವು ತಂದಿದೆ ಎಂದರು.

**ಬಿಜೆಪಿಗೆ ಸೇರ್ಪಡೆ :** ಇಟ್ಟಿನಗಿರಣಿ ರಮೇಶ್, ಮಾದಮ್ಮ, ಬೇಬಿಯಮ್ಮ, ನಾಗರಾಜ್, ರೂಪಾ, ಮಂಜುನಾಥ್, ಶಾರದಮ್ಮ, ನಿಂಗರಾಜ್, ಪುಟ್ಟಪ್ಪ, ಆನಂದ್, ರಾಜೇಶ್, ಕುಮಾರ್, ಲಿಂಗಾಚಾರ್ಯ, ಮಂಜುನಾಥ್, ವೆಂಕಟೇಶ್, ಶೈಲಮ್ಮ, ರಾಜು, ಹೋಟೆಲ್ ತಿಪ್ಪೇಶ್, ಭಾಗ್ಯ ಎಂ. ಅಶೋಕ್, ಅನುಸೂಯಮ್ಮ, ಗೌತಮ್ ಟಿ., ಶಿವರಾಜ್ ಟಿ., ರಾಕೇಶ್, ಕಿರಣ್, ಮಂಜು, ಮಂಜುನಾಥ್, ವಿಜಯಕುಮಾರ್, ಸುನೀಲ್, ನವೀನ್, ಕಿರಣ್, ಸ್ವಾಮಿ, ತಿಮ್ಮೇಶ್, ಹರೀಶ್, ನವೀನ್, ಪ್ರವೀಣ್, ಆರ್ಚಾರಪ್ಪ, ಮುಜೀಬ್‌ಖಾನ್, ಬಸವರಾಜ್ ಅವಲಕ್ಕಿ, ಸುಜಾತಮ್ಮ, ಏಕಾಂತಮ್ಮ, ಪಾರ್ವತಮ್ಮ, ಸಿದ್ಲಿಂಗಸ್ವಾಮಿ, ದ್ಯಾಮವ್ವ, ಕೋಮಾಲಕ್ಷಮ್ಮ, ರಾಜು, ಶೇಖ್‌ಅಹ್ಮದ್, ಪರಪ್ಪ, ಮಂಜಪ್ಪ, ಪದ್ಮಮ್ಮ, ಸರ್ವಮಂಗಳ, ಶಾಂತಮ್ಮ, ಆಶಾ, ಪ್ರಕಾಶ್, ನಾಗರಾಜ್, ತಿಪ್ಪೇಸ್ವಾಮಿ, ಹನುಮಂತಪ್ಪ, ನವೀನ್, ರಾಜಣ್ಣ ಆಟೋ ವೆಂಕಟೇಶ್, ಆಟೋ ಆನಂದ್ ಈ ಸಂದರ್ಭದಲ್ಲಿ ಬಿಜೆಪಿಗೆ ಸೇರ್ಪಡೆಗೊಂಡರು.

ಕು॥ನಿವೇದಿತಾ ಪ್ರಾರ್ಥಿಸಿದರು, ಸಿದ್ದಲಿಂಗಪ್ಪ ಸ್ವಾಗತಿಸಿದರು, ಪ್ರಾಸ್ತಾವಿಕ ನುಡಿಗಳು ಕೆ.ಎನ್. ಓಂಕಾರಪ್ಪ, ಹೆಚ್.ತಿಮ್ಮಣ್ಣ ವಂದಿಸಿದರು.ಮಾಜಿಸಚಿವಎಸ್.ಎ.ರವೀಂದ್ರನಾಥ್, ಬಿಜೆಪಿ ಯುವ ಮುಖಂಡ ಹೆಚ್.ಎಸ್. ನಾಗರಾಜ್, ಕೆ.ಎನ್.ಓಂಕಾರಪ್ಪ, ಬಿ.ಕಲ್ಲೇಶಪ್ಪ, ಎಲ್.ಮುಕುಂದ, ಸಮಾಜ ಸೇವಕ ಎಂ. ಆನಂದಪ್ಪ, ನಾಗರಾಜ್, ವಾಸು ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನಂತರ ಭದ್ರಾವತಿಯ ತೃಪ್ತಿ ಮೆಲೋಡಿಸ್‌ರವರಿಂದ ರಸಮಂಜರಿ ಕಾರ್ಯಕ್ರಮ ನಡೆಯಿತು.

## ರೋಹನ್ ಜೋಡಿಗೆ ಪರಾಜಯ

**ಸಿನ್ಸಿಯಾಟಿ (ಅಮೆರಿಕ):** 7ನೇ ಶ್ರೇಯಾಂಕಿತ ಭಾರತದ ರೋಹನ್ ಬೋಪಣ್ಣ ಹಾಗೀ ಕ್ರೋಷಿಯಾದ ಇವಾನ್ ಡೊಡಿಗ್ ಗುರುವಾರ ವೆಸ್ಟರ್ನ್ ಹಾಗೂ ಸದರ್ನ್ ಓಪನ್ ಎಟಿಪಿ ವರ್ಲ್ಡ್ ಟೂರ್ ಮಾಸ್ಟರ್ಸ್ 1000 ಟೆನಿಸ್ ಚಾಂಪಿಯನ್‌ಷಿಪ್ ಡಬಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ದ್ವಿತೀಯ ಶ್ರೇಯಾಂಕಿತ ಪೋಲೆಂಡ್‌ನ ಲೂಕಾಸ್ ಕುಬೊಟ್ ಹಾಗೂ ಬ್ರೆಜಿಲ್‌ನ ಮಾರ್ಸೆಲೊ ಮೆಲೊ ಅವರಿಗೆ 1–6, 7–6– (7/5), 7–10ರಿಂದ ಶರಣಾದರು.

**ನಡಾಲ್ ಸೋಲು:** ಆಸ್ಟ್ರೇಲಿಯಾದ ನಿಕ್ ಕಿರ್ಗಿಯೋಸ್ ಅವರು ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕಿಯ ಸ್ಪೇನ್‌ನ ರಾಫೆಲ್ ನಡಾಲ್ ಅವರನ್ನು 80 ನಿಮಿಷಗಳಲ್ಲಿ 6–2, 7–5ರಿಂದ ಅಚ್ಚರಿಗೊಳಿಸಿದರು.

ಒಂದೇ ದಿ ಎರಡು ಪಂದ್ಯಗಳನ್ನಾಡಿದ ಕಿರ್ಗಿಯೋಸ್ ಈ ಪಂದ್ಯಕ್ಕೆ ಸುಮಾರು ಏಳು ಗಂಟೆಗಳ ಮುನ್ನ ಮೂರನೆ ಸುತ್ತಿನಲ್ಲಿ ಇವೊ ಕಾರ್ಲೋವಿಕ್ ಅವರನ್ನು 4–6, 7–6 (8/6), 6–3ರಿಂದ ಸೋಲಿಸಿದ್ದರು

## ಸ್ವಾಸಿಕ್ ಯೂನಿಯನ್‌ಗೆ ಕ್ರಿಕೆಟ್ ಪ್ರಶಸ್ತಿ

**ಬೆಂಗಳೂರು:** ಶುಭಾಂಗ್ ಹೆಗ್ಡೆ ಅವರ ಪರಿಣಾಮಕಾರಿ ಬೌಲಿಂಗ್ ಹಾಗೂ ದೇವದತ್ ಪಡಿಕ್ಕಲ್ ಅವರ ಉಪಯುಕ್ತ ಬ್ಯಾಟಿಂಗ್ ಮೂಲಕ ವಲ್ಚರ್ಸ್ ಸಿಸಿ ವಿರುದ್ಧ ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿದ ಸ್ವಾಸ್ತಿಕ್ ಯೂನಿಯನ್ ಸಿಸಿ (2) ತಂಡದವರು ಶನಿವಾರ ಕೆಎಸ್‌ಸಿಎ ಆಶ್ರಯದ ಮೊದಲ ಗುಂಪಿನ ಮೊದಲ ಮೂರು ಡಿವಿಷನ್‌ಗಳ 19 ವರ್ಷದೊಳಗಿನವರ ಅಂತರ ಕ್ಲಬ್ ಕ್ರಿಕೆಟ್ ಟೂರ್ನಿ ಪ್ರಶಸ್ತಿ ಗೆದ್ದುಕೊಂಡರು.

ವಲ್ಚರ್ಸ್ ಸಿಸಿ: 49.3 ಓವರ್‌ಗಳಲ್ಲಿ 101 (ಸೌರಣ್ ಮಟ್ಟೂರ್ 31, ವಿಧ್ಯಾದರ ಪಾಟಿಲ್ 32ಕ್ಕೆ3, ಶುಭಾಂಗ್ ಹೆಗ್ಡೆ 15ಕ್ಕೆ4, ಶುಭಂ ಸಿನ್ಹಾ 26ಕ್ಕೆ2); ಸ್ವಾಸ್ತಿಕ್ ಯೂನಿಯನ್ ಸಿಸಿ (2): 45.1 ಓವರ್‌ಗಳಲ್ಲಿ 8 ವಿಕೆಟ್‌ಗೆ 184 ಡಿಕ್ಲೇರ್ಡ್ (ದೇವದತ್ ಪಡಿಕ್ಕಲ್ 62, ಗೌತಂ ಸಾಗರ್ 38, ಸುಜನ್ ಸಾಟೇರಿ 43, ರುಚಿತ್ ಜೋಶಿ 32ಕ್ಕೆ2, ಆ್ಯಮೆ ಶಾನಭಾಗ್ 35ಕ್ಕೆ2)



■ ಕೆಎಸ್‌ಸಿಎ ಆಶ್ರಯದ ಮೊದಲ ಗುಂಪಿನ ಮೊದಲ ಮೂರು ಡಿವಿಷನ್‌ಗಳ 19 ವರ್ಷದೊಳಗಿನವರ ಅಂತರ ಕ್ಲಬ್ ಕ್ರಿಕೆಟ್ ಟೂರ್ನಿ ಪ್ರಶಸ್ತಿ ಗೆದ್ದ ಸ್ವಾಸ್ತಿಕ್ ಯೂನಿಯನ್ ಸಿಸಿ (2) ತಂಡ. (ಎಡದಿಂದ) ನಿಂತವರು: ನಸೀರುದ್ದೀನ್, ಪ್ರಥಮೇಶ್, ಚಿನ್ಮಯ್, ಶ್ರೀ, ವಿಕ್ರಂ, ಆಕಾಶ್, ಎನ್.ವಿ.ಪ್ರಣವ್, ಅಖಿಬ್, ಇರ್ಫಾನ್ ಸೇಟ್; ಕುಳಿತವರು: ವಿಧ್ಯಾಧರ ಪಾಟಿಲ್, ಕೆ.ವಿ.ಅನೀಶ್, ಸಮರ್ಥ್ ಹೆಗ್ಡೆ, ದೇವದತ್ ಪಡಿಕ್ಕಲ್ (ಕ್ಯಾಪ್ಟನ್), ಶುಭಾಂಗ್ ಹೆಗ್ಡೆ, ಸುಜಯ್ ಗೌತಂ ಸಾಗರ್

## ಸಿರಾಜ್ ಮೂರು ಗೋಲು ಟಾರ್ನಡೋಸ್‌ಗೆ ಜಯ

**ಬೆಂಗಳೂರು:** ಸಿರಾಜ್ ಅವರ ಮೂರು ಗೋಲುಗಳ ನೆರವಿನಿಂದ ಟಾರ್ನಡೋಸ್ ಎಫ್‌ಸಿ ತಂಡದವರು ಬಿಡಿಎಫ್‌ಎ ಆಶ್ರಯದ 'ಸಿ' ಡಿವಿಷನ್ ಫುಟ್‌ಬಾಲ್ ಲೀಗ್‌ನ 'ಎಲ್' ಗುಂಪಿನ ಪಂದ್ಯದಲ್ಲಿ ಎಕ್ಸೆಲ್ಸಿಯರ್ ಎಫ್‌ಸಿ ವಿರುದ್ಧ 7–1 ಗೋಲುಗಳ ಸುಲಭ ಜಯ ಗಳಿಸಿದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಈ ಪಂದ್ಯದಲ್ಲಿ ಟಾರ್ನಡೋಸ್‌ನ ಅಮೀನ್ (8), ಖಾಸಿಂ (17, 44), ಜೊನೈದ್ (25) ಹಾಗೂ ಸಿರಾಜ್ (31, 46, 49) ಅವರು ಗೋಲು ಗಳಿಸಿದರೆ, ಎಕ್ಸೆಲ್ಸಿಯರ್‌ನ ಏಕೈಕ ಗೋಲನ್ನು ಜೋಶುವಾ ದಾಖಲಿಸಿದರು.

ವೆಹಿಕಲ್ಸ್ ಎಫ್‌ಸಿ ತಂಡದವರು ದಿನದ ಕೊನೆಯ ಪಂದ್ಯದಲ್ಲಿ ಮಹಾರಾಜ ಸೋಷಿಯಲ್ಸ್ ಎಫ್‌ಸಿ ವಿರುದ್ಧ 4–0 ಗೋಲುಗಳಿಂದ ಗೆದ್ದರು. ವೆಹಿಕಲ್ಸ್ ಕಡೆ ಶಿವ (9, 37) ಹಾಗೂ ಅನ್ಬು (42, 46) ಅವರು ಗೋಲು ಗಳಿಸಿದರು

## ರೂಪೀಕ್‌ನಿಂದ ಆ್ಯಪ್ ಬಿಡುಗಡೆ

**ಬೆಂಗಳೂರು:** ಐಐಟಿ–ಬಾಂಬೆಯ ಹಳೆಯ ವಿದ್ಯಾರ್ಥಿಗಳು ಸೇರಿ ಸ್ಥಾಪಿಸಿರುವ ಬೆಂಗಳೂರು ಮೂಲದ ತಂತ್ರಜ್ಞಾನ ಕಂಪನಿಯಾಗಿರುವ ರೂಪೀಕ್ ಫಿನ್‌ಟೆಕ್ ಕಂಪನಿ ಕೇವಲ 30 ನಿಮಿಷಗಳಲ್ಲಿ (ಅರ್ಧ ಗಂಟೆಯಲ್ಲಿ) ಆನ್‌ಲೈನ್ ಮೂಲಕ ಚಿನ್ನದ ಮೇಲೆ ಸಾಲ ಪಡೆಯುವ ಆ್ಯಪ್ ಅನ್ನು ಬಿಡುಗಡೆ ಮಾಡಿದೆ.

ಗ್ರಾಹಕರಿಗೆ ಕಡಿಮೆ ಬಡ್ಡಿ ದರದಲ್ಲಿ ಚಿನ್ನದ ಮೇಲೆ ಸಾಲ ಸೌಲಭ್ಯ ನೀಡುವ ದೃಷ್ಟಿಯಿಂದ 2015 ರಲ್ಲಿ ರೂಪೀಕ್ ಆರಂಭಿಸಲಾಗಿತ್ತು. ಪ್ರಸ್ತುತ ರೂಪೀಕ್‌ನ ಗ್ರಾಹಕರ ಸಂಖ್ಯೆ 10,000 ದ ಗಡಿ ದಾಟಿದೆ.

ರೂಪೀಕ್‌ನ ಸಂಸ್ಥಾಪಕ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಸುಮೀತ್ ಮಣಿಯಾರ್ ಅವರು ಮಾತನಾಡಿ, ರೂಪೀಕ್‌ನಲ್ಲಿ ಅತ್ಯಂತ ಸುಲಭವಾಗಿ ಚಿನ್ನದ ಮೇಲಿನ ಸಾಲವನ್ನು ಪಡೆಯಬಹುದಾಗಿದೆ ಎಂದು ಗ್ರಾಹಕರು ಸಂತಸಗೊಂಡಿದ್ದಾರೆ. ಗ್ರಾಹಕರು ತಮ್ಮ ಮೊಬೈಲ್ ಫೋನ್‌ನಲ್ಲಿ ರೂಪೀಕ್ ಆ್ಯಪ್ ಅನ್ನು ಇನ್‌ಸ್ಟಾಲ್ ಮಾಡಿಕೊಂಡು ಕೇವಲ 15 ಸೆಕೆಂಡ್‌ಗಳಲ್ಲಿ ಸಾಲಕ್ಕಾಗಿ ಮನವಿ ಸಲ್ಲಿಸಬಹುದು ಎಂದು ತಿಳಿಸಿದರು.

ರೂಪೀಕ್ ಕಳೆದ ಎರಡು ವರ್ಷಗಳಿಂದ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಬೆಂಗಳೂರಿನ ಗ್ರಾಹಕರು ಇದರ ಮೊದಲ ಗ್ರಾಹಕರಾಗಿದ್ದು, ಈ ಸೇವೆಯನ್ನು ಪಡೆದಿದ್ದಾರೆ.

ರೂಪೀಕ್‌ನ ಚೀಫ್ ಗ್ರೋಥ್ ಆಫೀಸರ್ ಪ್ರಸಾದ್ ಎಸ್. ಅವರು ಮಾತನಾಡಿ, ಆನ್‌ಲೈನ್ ಚಿನ್ನದ ಸಾಲಗಳು ವಿತರಣಾ ವೆಚ್ಚವನ್ನು ಕಡಿಮೆ ಮಾಡಲಿವೆ ಮತ್ತು ಆನ್‌ಲೈನ್ ಇನ್‌ಶ್ಯೂರೆನ್ಸ್ ರೀತಿಯಲ್ಲಿ ಗ್ರಾಹಕರು ಬಡ್ಡಿಯನ್ನು ಉಳಿತಾಯ ಮಾಡಬಹುದಾಗಿದೆ. ಚಿನ್ನದ ಮೇಲೆ ಸಾಲ ನೀಡುವ ಕಂಪನಿಗಳು ಮತ್ತು ಇತರೆ ಸಾಲ ನೀಡುವ ಸಂಸ್ಥೆಗಳಿಗಿಂತ ನಮ್ಮ ಚಿನ್ನದ ಮೇಲಿನ ಸಾಲ ಯೋಜನೆಗಳು ಶೇ. 25 ರಷ್ಟು ಕಡಿಮೆ ದರದಲ್ಲಿರುತ್ತವೆ ಎಂದು ವಿವರಿಸಿದರು.

ರೂಪೀಕ್‌ನ ಚಿನ್ನದ ಮೇಲಿನ ಸಾಲ ಯೋಜನೆಯಲ್ಲಿ ತಿಂಗಳಿಗೆ ಬಡ್ಡಿದರ ಶೇ.1.5 ರಷ್ಟಿರುತ್ತದೆ ಮತ್ತು 12 ತಿಂಗಳ ಅವಧಿಯದ್ದಾಗಿರುತ್ತದೆ. ಮಾರುಕಟ್ಟೆಯಲ್ಲಿ ಇತರೆ ಚಿನ್ನದ ಮೇಲೆ ಸಾಲ ನೀಡುವ ರೀತಿಯಲ್ಲಿ ಬಡ್ಡಿ ದರದಲ್ಲಿ ಕಾಲಕಾಲಕ್ಕೆ ಹೆಚ್ಚಳ ಇರುವುದಿಲ್ಲ.

ರೂಪೀಕ್‌ನಲ್ಲಿ ಒಂದೇ ರೀತಿಯ ಬಡ್ಡಿ ದರ ಇರುತ್ತದೆ. ಗ್ರಾಹಕರು ತಮ್ಮ ಅನುಕೂಲಕ್ಕೆ ತಕ್ಕಂತೆ ಮೂರು ತಿಂಗಳಿಗೊಮ್ಮೆ ಅಥವಾ ಆರು ತಿಂಗಳಿಗೊಮ್ಮೆ ಬಡ್ಡಿ ನೀಡುವ ಅವಕಾಶವೂ ಇದೆ. ಸಾಲವನ್ನು ಹಿಂತಿರುಗಿಸಿದ ತಕ್ಷಣಕ್ಕೆ ಅವರ ಚಿನ್ನವನ್ನು ಮನೆ ಬಾಗಿಲಿಗೆ ತಲುಪಿಸಲಾಗುತ್ತದೆ. ಆಧಾರ್ ಜೋಡಣೆ ಆಧಾರದಲ್ಲಿ ಎಲ್ಲಾ ಪ್ರಕ್ರಿಯೆಗಳು ಕಾಗದ ರಹಿತವಾಗಿ ಮತ್ತು ಅತ್ಯಂತ ವೇಗವಾಗಿ ನಡೆಯುತ್ತವೆ. ಈ ಮೂಲಕ ಗ್ರಾಹಕರ ಸಮಯದ ಉಳಿತಾಯವಾಗುತ್ತದೆ.

## ಅತೀ ಅಗ್ಗದ ಸ್ಮಾರ್ಟ್ ಪೋನ್‌ಬಿಡುಗಡೆ

**ಬೆಂಗಳೂರು:** ಸ್ವೈಪ್ ನಿಂದ ELITE4G ಯ ಪರಿಚಯದೊಂದಿಗೆ ಬಾರತದ 4ಜಿ ಅನುಭವ ಹೆಚ್ಚು ಆಕರ್ಷಕವಾಗಲಿದೆ. ಸ್ವೈಪ್ ನ ಪ್ರಶಂಸೆ ಪಡೆದ ELITE ಸರಣಿಯ ಈ ಹೊಸ ಪರಿಚಯವು ಭಾರತದ ಆಕಾಂಕ್ಷಿ ಯುವಕರಿಗೆ ಸಾಟಿಯಿಲ್ಲದ 4ಜಿ ಅನುಭವ ನೀಡಲಿದೆ. ಈ ಹಣಕ್ಕೆ ಮೌಲ್ಯವಿರುವ ಉಪಕರಣವು ಈಗಿನ ಅವಶ್ಯಕತೆಯನ್ನು ಪೂರೈಸಲಿದ್ದು 1ಜಿಬಿ ಖಂಒ ಗೆ ರೂ. 3999ಗಳ ಉತ್ತಮ ದರದಲ್ಲಿ ಅತ್ಯಾಧುನಿಕ ತಂತ್ರಜ್ಞಾನ ನೀಡಲಿದೆ.

ಸ್ವೈಪ್ ELITE 4ಜಿ 5"ನ ಈಫಗಿಉಂ ಗೊರಿಲ್ಲಾ ಗ್ಲಾಸ್ ಡಿಸ್ಪ್ಲೇ ಹೊಂದಿದ್ದು, ಅದ್ಭುತವಾದ ಕಾರ್ಯಾಚರಣೆ ನೀಡಲಿದೆ. ಸ್ಕ್ರಾಚ್ ಮತ್ತು ಇಂಪಾಕ್ಟ್ ನಿರೋಧಕ ಗೊರಿಲ್ಲಾ ಗ್ಲಾಸ್, ಜೊತೆಗೆ ಅದರ ಸಣ್ಣ ಗಾತ್ರ, ಇಐಖಖಿಇ4ಉ ಯ ಕೆಪಾಸಿಟೀವ್ ಟಚ್ ಸ್ಕ್ರೀನ್ ನ ಕಾರ್ಯದಲ್ಲಿ ಅಡ್ಡಿ ಮಾಡದೆ ಅಥವಾ ತೂಕವನ್ನು ಹೆಚ್ಚಿಸದೆ ಉಪಕರಣವನ್ನು ರಕ್ಷಿಸುತ್ತದೆ. ಅದ್ಭುತ ವಿನ್ಯಾಸ ಹೊಂದಿರುವ ಇಐಖಖಿಇ4ಉ ಕಪ್ಪು, ಗ್ರೇ ಮತ್ತು ಚಿನ್ನದ ಬಣ್ಣಗಳಲ್ಲಿ ಲಭ್ಯವಿದೆ. ಅದರ ಸುಲಭ ಬಳಕೆಯ ವರ್ಧಿತ ವಿನ್ಯಾಸದಿಂದ ಈ ಫೋನ್ ಗೆ ಆಕರ್ಷಕ ನೋಟ ಮತ್ತು ಉತ್ತಮ ಅನುಭವ ನೀಡುತ್ತದೆ.

ELITE4G ಯು 1.3 GHz ಕ್ವಾಡ್ ಕೋರ್ ಪ್ರೊಸೆಸರ್ ಮತ್ತು ಆಂಡ್ರಾಯ್ಡ್ 6 ಹೊಂದಿದೆ. ELITE4G ನಲ್ಲಿ 4f 4G VOLTE ಅನುಕೂಲವಿದೆ ಮತು 8 ಉಃ ಗಳ ಆಂತರಿಕ ಮೆಮರಿ ಹೊಂದಿಎ (64 ಉಃವರೆಗೆ ವರ್ಧಿಸಬಹುದು).

ಅದರ 8MP ಹಿಂಬದಿ ಕ್ಯಾಮೆರಾದಿಂದ ಯಾವುದೇ ಬೆಳಕಿನ ಸ್ಥಿತಿಯಲ್ಲಿಯೂ ಅಧುತ ಚಿತ್ರಗಳನ್ನು ಮತ್ತು ವೀಡಿಯೊಗಳನ್ನು ತೆಗೆಯಬಹುದು.

Printed, published, Editor and owned by K.S. BHASKAR, Published at 103, 1st floor, Aurelia Apartment, 35/1, Langford Road, Shantinagar, Near Hockey Stadium Bus Stop, Bangalore - 560 025.
E-mail: suvarnatok@gmail.com. Phone: 22223406/07, Fax: 22223405 and Printed at LAVANYA MUDRANA , UNIT-II, No. 79, 9th Cross, 5th Main, Chamarajpet, Bangalore-560 018.
Editor: K.S. BHASKAR, KARKAN/2011/40269, Posted at MBC, Bangalore PSO,- Mysore Road, Reg No: KARN/BGE/1097/2015-2017